**ಓ.ಎಸ್.ನಂಃ 177/2022** **ಪಿ.ಡಬ್ಲ್ಯೂ-1**

**<u>ದಿನಾಂಕಃ 17-12-2025 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**
**<u>ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ-</u>**

ಲಕ್ಷ್ಮಮ್ಮನವರ ಆಧಾರ್ ಕಾರ್ಡ್‌ನ ದೃಢೀಕೃತ ನಕಲು ನಿಪಿ-28, ಗೌರಮ್ಮನ ಆಧಾರ್ ಕಾರ್ಡ್‌ನ ದೃಢೀಕೃತ ನಕಲು ನಿಪಿ-29 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಎಸ್ ಎ ಕೆ ವಕೀಲರಿಂದಃ-</u>**

ನನ್ನ ತಂದೆಯ ಆಸ್ತಿಗಳಲ್ಲಿ ನನಗೆ ಭಾಗ ಬರಬೇಕೆಂದು ಈ ದಾವೆ ಸಲ್ಲಿಸಿರುತ್ತೇನೆ. ನಾನು ತಾಲ್ಲೂಕು ಕಚೇರಿಯಿಂದ ನಮ್ಮ ಕುಟುಂಬದ ವಂಶವೃಕ್ಷ ಮಾಡಿಸಿರುತ್ತೇನೆ. ನಾನು ವಂಶವೃಕ್ಷ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿಗೆ ನಿಪಿ-1 ತೋರಿಸಲಾಗಿ ಅದು ತನ್ನ ಸಹಿ ಅಲ್ಲ ಎಂದು ಹೇಳಿ ನಂತರ ಪುನಃ ನನ್ನ ಸಹಿ ಆಗಿರುತ್ತದೆ ಎಂದು ಹೇಳುತ್ತಾರೆ. ನಾನು ನಿಪಿ-1 ಕ್ಕೆ ನನ್ನ ಸಹಿಯನ್ನು ಇಗಿರುವ ವಕೀಲರ ಸಮಕ್ಷಮ ಹಾಕಿರುತ್ತೇನೆ. ನಾನು ಎಚ್.ವಿ. ರಮೇಶ ನೋಟರಿ ವಕೀಲರ ಸಮಕ್ಷಮ ಸಹಿ ಹಾಕಿರುವುದಿಲ್ಲ. ನಿಪಿ-1 ಎಲ್ಲಿ ಟೈಪ್ ಮಾಡಿಸಿರುತ್ತೇನೆಂದು ನನಗೆ ನೆನಪಿಲ್ಲ. ನಾನು 2 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ-24 ಮತ್ತು 25 ಶಾಲೆಯವರು ನೀಡಿರುತ್ತಾರೆ. ನಿಪಿ-24 ಮತ್ತು 25 ಪಡೆಯಲು ನಾನು ಅರ್ಜಿ ಸಲ್ಲಿಸಿರುವುದಿಲ್ಲ. ಸಾಕ್ಷಿ ಮುಂದುವರಿದು ನಾನು ಕೇಳಿರುವುದರಿಂದ ಶಾಲೆಯವರು ನೀಡಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-24 ಮತ್ತು 25 ರಲ್ಲಿ ಏನು ಇದೆ ಎಂದು ನನಗೆ ಗೊತ್ತಿಲ್ಲ. ನಿಪಿ-24 ಮತ್ತು 25 ರಲ್ಲಿ ಇರುವ ಗೌರಮ್ಮ ಮತ್ತು ಲಕ್ಷ್ಮಮ್ಮ ಮುನಿಸ್ವಾಮಿರವರ ಮಕ್ಕಳು ಇರುತ್ತಾರೆ. ಗೌರಮ್ಮ ದೊಡ್ಡ ಮಗಳು ಲಕ್ಷ್ಮಮ್ಮ ಎರಡನೇ ಮಗಳಾಗಿರುತ್ತಾಳೆ. ನಿಪಿ-24 ಮತ್ತು 25 ರಲ್ಲಿ ತಾಯಿಯ ಹೆಸರು ಕೊಟ್ಟಿರುವುದಿಲ್ಲ ಎಂದರೆ ಸರಿ. ನಿಪಿ-24 ರಲ್ಲಿ ಲಕ್ಷ್ಮಮ್ಮ ಮಾರ್ಚ ತಿಂಗಳಿನಲ್ಲಿ ಕೊಟ್ಟಿರುವ ಬಗ್ಗೆ ಮತ್ತು ನಿಪಿ-25 ರಲ್ಲಿ ಗೌರಮ್ಮ ಮೇ ತಿಂಗಳಿನಲ್ಲಿ ಹುಟ್ಟಿರುವ ಬಗ್ಗೆ ಬರೆಯಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಗೋಸ್ಕರ ನಿಪಿ-23 ರಿಂದ 25 ನಾನು ಸೃಷ್ಟಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಭಾವನಹಳ್ಳಿ ಗ್ರಾಮದಲ್ಲಿ ಜನಿಸಿರುತ್ತೇನೆ ವರ್ಷ ನನಗೆ ಗೊತ್ತಿಲ್ಲ. ನನಗೆ ಈಗ 55 ವರ್ಷ ವಯಸ್ಸು

ಆಗಿರುತ್ತದೆ. ಈಗ ನನಗೆ ಗೌರಮ್ಮ ಮತ್ತು ಲಕ್ಷ್ಮಮ್ಮ ಎಲ್ಲಿ ವಾಸವಾಗಿದ್ದಾರೆಂದು ಗೊತ್ತಿಲ್ಲ. ಲಕ್ಷ್ಮಮ್ಮ ಮತ್ತು ಗೌರಮ್ಮ ಈಗ ಸುಮಾರು 15 ವರ್ಷಗಳ ಹಿಂದೆ ನನಗೆ ಭೇಟ್ಟಿಯಾಗಿ ಮಾತುಕತೆ ಆಗಿರುತ್ತದೆ. ನನ್ನ ಗಂಡನ ಹೆಸರು ಮುನಿಸ್ವಾಮಿ ಆಗಿರುತ್ತದೆ. ನನಗೆ ಮುನಿಸ್ವಾಮಿರವರ ತಂದೆಯ ಹೆಸರು ಗೊತ್ತಿಲ್ಲ. ನಾನು ಮುನಿಸ್ವಾಮಿರವರ ತಂದೆಯನ್ನು ನೋಡಿರುವುದಿಲ್ಲ. ನನ್ನ ಗಂಡನ ಜೊತೆ ಹುಟ್ಟಿದ ಅವರ ಎಷ್ಟು ಅಣ್ಣ ತಮ್ಮಂದಿರು ಎಂದು ನನಗೆ ಗೊತ್ತಿಲ್ಲ. ನನಗೆ 19 ವರ್ಷ ವಯಸ್ಸು ಇದ್ದಾಗ ಮುನಿಸ್ವಾಮಿ ರವರಿಗೆ ನಾನು ಪ್ರೀತಿಸಿ ಮದುವೆ ಆಗಿರುತ್ತೇನೆ. ನನ್ನ ತಂದೆ ಮಳ್ಳಪ್ಪರವರ ಜೊತೆ ಎಷ್ಟು ಜನ ಜನಿಸಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿ ಮಳ್ಳಪ್ಪ ಒಬ್ಬರೇ ಅವರ ತಂದೆಗೆ ಮಗ ಎಂದು ಹೇಳುತ್ತಾರೆ. ಮಳ್ಳಪ್ಪನವರಿಗೆ ಒಟ್ಟು 6 ಎಕರೆ 27 ಗುಂಟೆ ಜಮೀನು ಇತ್ತು. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದು ಮಳ್ಳಪ್ಪನವರ ಭಾವಚಿತ್ರ ಅಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಇನ್ನೊಂದು ಭಾವಚಿತ್ರ ತೋರಿಸಲಾಗಿ ಅದು ತನ್ನ ತಾಯಿ ಯಳಗಮ್ಮನ ಭಾವಚಿತ್ರ ಅಲ್ಲ ಎಂದು ಹೇಳುತ್ತಾರೆ. ದಾವಾ ಸ್ವತ್ತು ನನ್ನ ತಂದೆಗೆ ಸರ್ಕಾರದಿಂದ ಮಂಜೂರು ಆಗಿರುವ ಬಗ್ಗೆ ನನಗೆ ತಿಳಿದು ಬಂದಿರುತ್ತದೆ. ನನಗೆ ನನ್ನ ಗಂಡನ ತಾಯಿ ಹೆಸರು ಗೊತ್ತಿಲ್ಲ. ನನ್ನ ಗಂಡನ ಅಣ್ಣ ತಮ್ಮಂದಿರು ಜಯರಾಂ, ವಿಜಯ ಕುಮಾರ, ಕೆಂಪರಾಜು, ರವಿ, ರಾಮಚಂದ್ರ, ಮಂಜುನಾಥ ಎಂದರೆ ಸರಿಯಲ್ಲ. ನನ್ನ ತಂದೆಗೆ ಸರ್ಕಾರದವರು ಯಾವಾಗ ಆಸ್ತಿ ನೀಡಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ದಾವಾ ಸ್ವತ್ತು ನಾನು ಹುಟ್ಟುವ ಮುಂಚೆ ಸರ್ಕಾರದಿಂದ ಮಂಜೂರಾಗಿರುತ್ತದೆ. ನನಗೆ 4 ಜನ ಮಕ್ಕಳು. ಆಶಾರಾಣಿ ನನಗೆ ದೊಡ್ಡ ಮಗಳು. ಸುಧಾರಾಣಿ ಎರಡನೇ ಮಗಳು. ನನ್ನ ಮಕ್ಕಳು ನನ್ನ ಜೊತೆ ಚೆನ್ನಾಗಿರುತ್ತಾರೆ. ಈ ದಿನ ನ್ಯಾಯಾಲಯಕ್ಕೆ ನನ್ನ ಮಕ್ಕಳು ಬಂದಿರುತ್ತಾರೆ ಎಂದರೆ ಸರಿ. ನನ್ನ ಮಕ್ಕಳು ತಾತನ ಆಸ್ತಿಯಲ್ಲಿ ಭಾಗ ಬೇಕೆಂದು ಅಸಲು ದಾವೆ ಸಂಖ್ಯೆ 527/2011 ಹಾಕಿರುವುದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಕಣಿವೇನಹಳ್ಳಿ ಗಡಿ, ಉತ್ತರಕ್ಕೆ ಭಾವನಹಳ್ಳಿ ಗುಟ್ಟ, ದಕ್ಷಿಣಕ್ಕೆ ಕಣಿವೇನಹಳ್ಳಿ, ಪಶ್ಚಿಮಕ್ಕೆ ವಿಟ್ಟಲ್ ಸಿಂಗ್,. ನಾನು ಈಗ ಹೇಳಿದ ಚಕ್ಕಬಂದಿ ಈ ದಾವೆಯಲ್ಲಿ ತೋರಿಸಿರುತ್ತೇನೆ. ನಾನು ವಾದಪತ್ರದ 5 ಬಿ ಖಂಡಿಕೆಯಲ್ಲಿ ಹೇಳಿರುವಂತೆ ಅಸಲು ದಾವೆ ಸಂಖ್ಯೆ 158/1998 ನಾವೇ ವಿಜಯಲಕ್ಷ್ಮಿ ವಿರುದ್ಧ ಸಲ್ಲಿಸಿದ್ದೇವು. ನಾನು ವಾದಪತ್ರದಲ್ಲಿ ಮುನಿಸ್ವಾಮಿರವರು

ಯಳಗಮ್ಮನ ಮೇಲೆ ಓ.ಎಸ್.ನಂ.158/1998 ಸಲ್ಲಿಸಿದ್ದಾರೆಂದು ಹೇಳಿರುವುದಿಲ್ಲ. ನಾನು ವಾದಪತ್ರದ 5 ಬಿ ಖಂಡಿಕೆಯಲ್ಲಿ ಕೆ. ಮುನಿಸ್ವಾಮಿ ಅಲಿಯಾಸ್ ಕೆಂಚಪ್ಪ ಕೋಲಾರ ನ್ಯಾಯಾಲಯದಲ್ಲಿ ಓ.ಎಸ್.ನಂ.158/1998 ಯಳಗಮ್ಮನ ಮೇಲೆ ಸಲ್ಲಿಸಿದ್ದಾರೆಂದು ಹೇಳಿರುವುದಿಲ್ಲ. ನಾನು ವಾದಪತ್ರದ 5 ಬಿ ಖಂಡಿಕೆಯಲ್ಲಿ ಮುನಿಸ್ವಾಮಿ ಸರ್ವೆ ನಂ.119/ಪಿ2 ರಲ್ಲಿ 3 ಎಕರೆ 27 ಗುಂಟೆ ಜಮೀನು ಆಂಜಿನಪ್ಪ ರವರಿಗೆ ಮಾರಾಟ ಮಾಡಿದ್ದಾರೆಂದು ಹೇಳಿರುವುದಿಲ್ಲ. ನಾನು ವಾದಪತ್ರದ 5 ಬಿ ಖಂಡಿಕೆಯಲ್ಲಿ ಸಂದಪ್ಪ ಸರ್ವೆ ನಂಬರ 255/1 ರಲ್ಲಿ ಗಂಗಾರಾಮಸಿಂಗ್ ಎನ್ನುವವರಿಗೆ 3 ಎಕರೆ ಮಾರಾಟ ಮಾಡಿದ್ದಾರೆಂದು ಹೇಳಿರುತ್ತೇನೆ. ಆ ರೀತಿ ಮಾರಾಟ ಮಾಡಿದವರು ನನ್ನ ಗಂಡ ಮುನಿಸ್ವಾಮಿ ಅಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನನ್ನ ತಂದೆ ಮಳ್ಳಪ್ಪ ತೀರಿಹೋದ ನಂತರ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕೇಸುಗಳು ನಡೆದ ವಿಚಾರ ನನಗೆ ಗೊತ್ತಿಲ್ಲ. ನನ್ನ ತಂದೆ ತೀರಿಹೋದ ಮೇಲೆ ದಾವಾ ಸ್ವತ್ತಿನ ಖಾತೆ ಯಾರ ಹೆಸರಿಗೆ ಇದೆ ಎನ್ನುವ ಪ್ರಶ್ನೆಗೆ ಸಾಕ್ಷಿ ಯಾವುದೇ ಉತ್ತರ ನೀಡಲಿಲ್ಲ. ಸಾಕ್ಷಿ ಮುಂದುವರಿದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ದಾವೆಯಲ್ಲಿ ವಿಜಯಲಕ್ಷ್ಮಿ ಮತ್ತು ಗಂಗಾರಾಮಸಿಂಗ್ ರವರಿಗೆ ಯಾವ ಕಾರಣಕ್ಕಾಗಿ ಈ ದಾವೆಯಲ್ಲಿ ಸೇರಿಸಿದ್ದಿರಾ ಎನ್ನುವ ಪ್ರಶ್ನೆಗೆ ಸಾಕ್ಷಿ ನಮಗೆ ಆಸ್ತಿ ಬರಬೇಕೆಂದು ಅವರಿಗೆ ಪಕ್ಷಗಾರರಾಗಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಾನು ನನ್ನ ಗಂಡನ ಸಹಿ ನೋಡಿದರೆ ಗುರುತಿಸಲು ಆಗುವುದಿಲ್ಲ. ನನ್ನ ಮಾವ ಕೆ. ಮುನಿಸ್ವಾಮಿ ಅಲಿಯಾಸ್ ಕೆಂಚಣ್ಣ ಅಸಲು ದಾವೆ ಸಂಖ್ಯೆ 158/1998 ಯಳಗಮ್ಮನ ಮೇಲೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮುನಿಸ್ವಾಮಿ ಅಲಿಯಾಸ್ ಕೆಂಚಣ್ಣ ಯಾರು ಎಂದು ನನಗೆ ಗೊತ್ತಿಲ್ಲ. ಅಸಲು ದಾವೆ ಸಂಖ್ಯೆ 158/1998 ನಡೆಯುತ್ತಿರುವುದು ನನ್ನ ತಾಯಿ ಇದ್ದಾಗ ನನಗೆ ಗೊತ್ತಾಗಿರುತ್ತದೆ. ಓ.ಎಸ್.ನಂ.158/1998 ನನ್ನ ತಾಯಿಯ ಪರವಾಗಿ ಆಗಿರುತ್ತದೆ. ಸಾಕ್ಷಿ ಮುಂದುವರಿದು ನನ್ನ ತಾಯಿ ಆ ಬಗ್ಗೆ ಹೇಳಿರುತ್ತಾರೆ. 1998 ರಲ್ಲಿ ನನ್ನ ತಂದೆ ತೀರಿಹೋಗಿರುತ್ತಾರೆ. ಅದಾದ 3 ವರ್ಷಗಳ ನಂತರ ನನ್ನ ತಾಯಿ ತೀರಿಹೋಗಿರುತ್ತಾರೆ. ನನ್ನ ತಂದೆ ಮಳ್ಳಪ್ಪ ಭಾವನಹಳ್ಳಿಯಲ್ಲಿ ತೀರಿಹೋಗಿರುತ್ತಾರೆ. ನನ್ನ ತಂದೆಯ ಮರಣ ಪ್ರಮಾಣ ಪತ್ರ ನ್ಯಾಯಾಲಯಕ್ಕೆ ಸಲಿಸಿರುತ್ತೇನೆ. ನನ್ನ ತಂದೆ ಮಳ್ಳಪ್ಪನ ತಂದೆ ಹೆಸರು ಕೆಂಪಣ್ಣ ಎಂದರೆ ಸರಿ. ಓ.ಎಸ್.ನಂ.158/1998 ಯಾವಾಗ ಇತ್ಯರ್ಥ

ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ತೀರಿಹೋದ ದಿನಾಂಕ ಮತ್ತು ತಿಂಗಳು ನನಗೆ ಗೊತ್ತಿಲ್ಲ. ನನ್ನ ತಂದೆ ಮಳ್ಳಪ್ಪ, ತಾಯಿ ಯಳಗಮ್ಮ ಮತ್ತು ನಾನು ಇರುವ ಭಾವ ಚಿತ್ರ ಇರುತ್ತದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನನ್ನ ತಂದೆ-ತಾಯಿ ದಾವಾ ಸ್ವತ್ತಿನ ಕಂದಾಯ ಕಟ್ಟಿರುವುದು ದಾಖಲೆ ನನ್ನ ವಕೀಲರಿಗೆ ಕೇಳಿ ಹೇಳುತ್ತೇನೆ. ನನ್ನ ತಂದೆ ತಾಯಿಯ ಪಡಿತರ ಚೀಟಿ ಮತ್ತು ಚನಾವಣಾ ಗುರುತಿನ ಚೀಟಿ ಎಲ್ಲಿರುತ್ತವೆ ಎಂದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಕೇ. ಹೇ. ಸರಿ ಇದೆ.
ಸಹಿ/-
**(ದಯಾನಂದ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**